ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಈ ಸಮಸ್ಯೆಯನ್ನು ಅವರು ಈವರೆಗೆ ನನ್ನ ಗಮನಕ್ಕೆ ತಂದಿರಲಿಲ್ಲ. ಒಂದು ವೇಳೆ ಅದು ಯಾವ ಸಮಸ್ಯೆ ಅಂದರೆ, ಪರ್ಟಿಕ್ಯುಲರ್ ಪ್ರಾಬ್ಲಮ್ ಯಾವುದಿದೆ ಅದನ್ನು ಪರಿಹಾರ ಮಾಡಲಿಕ್ಕೆ ನಾನು ಖಂಡಿತವಾಗಿ ಪ್ರಯತ್ನ ಮಾಡುತ್ತೇನೆಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ರಾಜ್ಯದಲ್ಲಿನ ಕ್ರೀಡಾಂಗಣಗಳು.

344(2242) ಶ್ರೀ ಕೆ. ವಿಶ್ವೇಶ್ವರ ಹೆಗ್ಗಡೆ, (ಅಂಕೋಲ) :— ಮಾನ್ಯ ಕನ್ನಡ ಮತ್ತು ಸಂಸ್ಕೃತಿ, ಯುವಜನ ಸೇವೆ ಹಾಗೂ ಕ್ರೀಡಾ ಸಚಿವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ 1994-95ರಿಂದ ಹೊಸದಾಗಿ ನಿರ್ಮಿಸಿದ ಕ್ರೀಡಾಂಗಣಗಳ ಸಂಖ್ಯೆ ಎಷ್ಟು? ಅದಕ್ಕೆ ತಗುಲಿದ ಒಟ್ಟು ವೆಚ್ಚವೆಷ್ಟು? (ವಿವರ ನೀಡುವುದು)

2) ಉತ್ತರ ಕನ್ನಡ ಜಿಲ್ಲೆಯ ಅಂಕೋಲ ಮತ್ತು ಯಲ್ಲಾಪುರದಲ್ಲಿ ಕ್ರೀಡಾಂಗಣ ನಿರ್ಮಿಸಲು ಉದ್ದೇಶಿಸಲಾಗಿದೆಯೇ? ಹಾಗಿದ್ದಲ್ಲಿ ಅದರ ಕಾರ್ಯ ಯಾವ ಹಂತದಲ್ಲಿದೆ? ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು? ಈ ಬಗ್ಗೆ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ, ಯುವಜನ ಸೇವೆ ಹಾಗೂ ಕ್ರೀಡಾ ಸಚಿವರು) :—

1) ರಾಜ್ಯದಲ್ಲಿ 1994-95ರಿಂದ ಹೊಸ ಕ್ರೀಡಾಂಗಣಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಾಗಿದೆ. ಸದರಿ ಕ್ರೀಡಾಂಗಣಗಳ ನಿರ್ಮಾಣಕ್ಕಾಗಿ ರೂ. 241.62 ಲಕ್ಷಗಳನ್ನು ಈಗಾಗಲೇ ವೆಚ್ಚ ಮಾಡಲಾಗಿದೆ. ಈ ಬಗ್ಗೆ ವಿವರಗಳನ್ನು ಅನುಬಂಧ-'ಅ'ನಲ್ಲಿ ಲಗತ್ತಿಸಲಾಗಿದೆ.

2) ಉತ್ತರ ಕನ್ನಡ ಜಿಲ್ಲೆಯ ಅಂಕೋಲ ಹಾಗೂ ಯಲ್ಲಾಪುರದಲ್ಲಿ ಕ್ರೀಡಾಂಗಣ ನಿರ್ಮಿಸುವ ಪ್ರಸ್ತಾವನೆ ಇರುತ್ತದೆ. ಯಲ್ಲಾಪುರ ಕ್ರೀಡಾಂಗಣದ ನೆಲ ಸಮತಟ್ಟು ಮಾಡುವ ಕಾರ್ಯ ಪ್ರಗತಿಯಲ್ಲಿದೆ. ಅಂಕೋಲದಲ್ಲಿ ಕ್ರೀಡಾಂಗಣ ನಿರ್ಮಿಸಲು ನಿವೇಶನ ಗುರುತಿಸಲಾಗಿದೆ. ನೀಲಿ ನಕ್ಷೆ ಮತ್ತು ಅಂದಾಜು ವೆಚ್ಚ ತಯಾರಿಸಲು ಲೋಕೋಪಯೋಗಿ ಇಲಾಖೆ, ಅಂಕೋಲ ಇವರಿಗೆ ತಿಳಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆ ಬಂದ ಕೂಡಲೆ ಆಡಳಿತಾತ್ಮಕ ಮಂಜೂರಾತಿ ನೀಡಲು ಪರಿಶೀಲಿಸಲಾಗುವುದು.

ಅನುಬಂಧ - ಅ

		ರೂ.ಲಕ್ಷಗಳಲ್ಲಿ
1)	ಮುಳಬಾಗಿಲು	9.50
2)	ಮಾಗಡಿ	9.50
3)	ಹೊಸದುರ್ಗ	14.00
4)	ಹಿರಿಯೂರು	10.90
5)	ಶ್ರೀರಂಗಪಟ್ಟಣ	3.00
6)	ಚನ್ನರಾಯಪಟ್ಟಣ	19.74
7)	ಬಾಗಲಕೋಟೆ	36.00
8)	ದಾಂಡೇಲಿ	13.30
9)	ನೆಲಮಂಗಲ	10.00
10)	ಕೆ.ಆರ್.ಪೇಟೆ	8.50
11)	ಸಿಂದನೂರು	10.00
12)	ಬಸವಕಲ್ಯಾಣ	2.50
13)	ಔರಾದ್	2.50
14)	ಕುಷ್ಟಗಿ	7.00
15)	ಕೊಪ್ಪಳ	5.00
16)	ಯಲಬುರ್ಗಾ	10.0
17)	ಬಂಗಾರಪೇಟೆ	8.50
18)	ಹೊಳಲ್ಕೆರೆ	10.20
19)	ಕೊಳ್ಳೆಗಾಲ	4.00
20)	ಸುಳ್ಯ	2.70
21)	ಬೆಳ್ತಂಗಡಿ	15.00
22)	ನರಸಿಂಹರಾಜಪುರ	10.00
23)	ಚಿಕ್ಕೋಡಿ	9.50
24)	ಶಿಗ್ಗಾಂ	5.28
25)	ಕನಕಪುರ	5.00
		241.02

ಶ್ರೀ ಬಸವನಗೌಡ ಪಾಟೀಲ್ (ಯತ್ನಾಳ್) ಶ್ರೀ ಕೆ. ವಿಶ್ವೇಶ್ವರ ಹೆಗಡೆ ಅವರ ಪರವಾಗಿ) :— ಸನ್ಮಾನ್ಯ ಅಧ್ಯಕ್ಷರೇ, ಯಲ್ಲಾಪುರದ ಕ್ರೀಡಾಂಗಣ ನಿರ್ಮಿಸುವ ಪ್ರಸ್ತಾವನೆ ಈ ಸರ್ಕಾರದ ಮುಂದೆ ಇದೆ ಎಂಬುದನ್ನು ಸನ್ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಆದರೆ, ಕಳೆದ ಎರಡು ವರ್ಷಗಳಿಂದ ಆಡಳಿತಾತ್ಮಕ ಮಂಜೂರಾತಿಯನ್ನು ನೀಡದೆ ವಿಶೇಷವಾಗಿ ಯುವಕರಿಗೆ ಪ್ರೋತ್ಸಾಹವನ್ನು ಕೊಡುವ ಕ್ರೀಡಾಂಗಣದ ಅವಶ್ಯಕತೆ ಇರುವುದರಿಂದ, ಈ ಒಂದು ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಎಂಬ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ :— ಸನ್ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಕ್ರೀಡಾಂಗಣಕ್ಕೆ 24 ಲಕ್ಷ ರೂಪಾಯಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಕೊಡಲಾಗಿದೆ. ಜಿಲ್ಲಾ ಪಂಚಾಯಿತಿ ಮತಿಯಿಂದ 10 ಲಕ್ಷ ರೂಪಾಯಿಗಳು ಮತ್ತು ಭಾರತ ಸರ್ಕಾರದಿಂದ 16.20 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಈ ಪರಿಷ್ಕೃತ ಅಂದಾಜು ಪಟ್ಟಿಯನ್ನು ಈಗಾಗಲೇ ಕ್ರೀಡಾಂಗಣದ ನಿರ್ಮಾಣ ಕಾರ್ಯವನ್ನು ಮಾಡಲಿಕ್ಕೆ ನ್ಯಾಯಾಲಯದ ತಡೆಯಾಜ್ಞೆ ಇತ್ತು. ಈ ತಡೆಯಾಜ್ಞೆ ಇದ್ದುದರಿಂದ ಸ್ವಲ್ಪ ತಡವಾಗಿದೆ. ಇತ್ತೀಚೆಗೆ 3 ತಿಂಗಳ ಹಿಂದೆ ನ್ಯಾಯಾಲಯದ ತಡೆಯಾಜ್ಞೆಯನ್ನು ತೆರವುಗೊಳಿಸಿರುವುದರಿಂದ ಕಾಮಗಾರಿಯು ಪ್ರಗತಿಯಲ್ಲಿದೆ. ಪ್ರಸ್ತುತ ಸಾಲಿನಲ್ಲಿ 5.85 ಲಕ್ಷ ರೂಪಾಯಿಗಳನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಕಾರ್ಯಕ್ಕೆ ಜಿಲ್ಲಾ ಪಂಚಾಯಿತಿ ಆಯವ್ಯಯ ಪಟ್ಟಿಯಲ್ಲಿ ಕೂಡ ಒದಗಿಸಲಾಗಿದೆ. ಅಂಕೋಲಾದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಎಂಟೂವರೆ ಎಕರೆ ಜಮೀನನ್ನು ಇಲಾಖೆಗೆ ವರ್ಗಾಯಿಸಲಿದ್ದು ಅಂದಾಜು ವೆಚ್ಚ ಹಾಗೂ ನೀಲಿ ನಕಾಶೆಯನ್ನು ಲೋಕೋಪಯೋಗಿ ಇಲಾಖೆಗೆ ಕಳುಹಿಸಲಾಗಿದೆ. ಇದು ಕೋರ್ಟಿನಲ್ಲಿ ತಡೆಯಾಜ್ಞೆ ಇರುವುದರಿಂದ ತಡವಾಗಿದೆ. ಈ ತಡೆಯಾಜ್ಞೆ ಈಗ ತೆರವಾಗಿರುವುದರಿಂದ ಇದು ಇನ್ನು ತಡವಾಗುವುದಿಲ್ಲ. ನಾವು ತೀವ್ರಗತಿಯಲ್ಲಿ ಕಾರ್ಯವನ್ನು ಪ್ರಾರಂಭ ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ರಾಜ್ಯದಲ್ಲಿ 1994-95 ರಿಂದ ಹೊಸದಾಗಿ ನಿರ್ಮಿಸಿದ ಕ್ರೀಡಾಂಗಣ ಸಂಖ್ಯೆ ಎಷ್ಟು, ಅದಕ್ಕೆ ತಗಲುವ ಒಟ್ಟು ವೆಚ್ಚವೆಷ್ಟು ಎನ್ನತಕ್ಕಂಥಾದ್ದು ನಮ್ಮ ಪ್ರಶ್ನೆ. ಇದರಲ್ಲಿ ಸುಮಾರು 2 ಕೋಟಿ 41 ಲಕ್ಷ ರೂಪಾಯಿಗಳ ಖರ್ಚುವೆಚ್ಚ ತೋರಿಸಿದ್ದಾರೆ. ಕೇವಲ 25 ಸ್ಥಳಗಳಲ್ಲಿ ಮಾತ್ರ ಇದರ ನಿರ್ಮಾಣವನ್ನು ಆಯ್ಕೆ ಮಾಡಿದ್ದಾರೆ. ನನ್ನ ಮತ ಕ್ಷೇತ್ರವಾದ ಗುರುಮಿಠಕಲ್‌ನಲ್ಲಿಯೂ ಕೂಡ ನಾವೇ ಅಸಿಸ್ಟೆಂಟ್ ಕಮೀಷನರ್‌ಗೆ ಹಣ ಸಂಗ್ರಹ ಮಾಡಿಕೊಟ್ಟಿದ್ದೇವೆ. ಅದನ್ನು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಿಂದ ಲೆವಲಿಂಗ್ ಮಾಡಿ ಅಲ್ಲಿಗೆ ಬಿಟ್ಟಿದ್ದಾರೆಯೇ ಹೊರತಾಗಿ ಜಿಲ್ಲಾ ಪರಿಷತ್ ನಿಂದಲೂ ಯಾವುದೇ ರೀತಿಯ ಕಾಂಟ್ರಿಬ್ಯೂಷನ್ ಇಲ್ಲ. ತಮ್ಮ ಕಾಂಟ್ರಿಬ್ಯೂಷನ್ ಕೂಡ ಕೊಟ್ಟಿಲ್ಲ. ಈ ಪಟ್ಟಿಯಲ್ಲಿಯೂ ಕೂಡ ಅದನ್ನು ಸೇರಿಸಿಲ್ಲ. ಇದಕ್ಕೆ ಕಾರಣ

ಏನು? ತಾವು ರಾಜ್ಯದಲ್ಲಿ 25 ಕಡೆಗಳಲ್ಲಿ ಈ ಕ್ರೀಡಾಂಗಣ ನಿರ್ಮಾಣ ಕಾರ್ಯವನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ. ನಮ್ಮಲ್ಲಿ ಅಸಿಸ್ಟೆಂಟ್ ಕಮೀಷನರ್ ಈಗಾಗಲೇ ಅರ್ಧಂಬರ್ಧ ಕೆಲಸ ಮಾಡಿಬಿಟ್ಟಿದ್ದಾರೆ. ಈ ರಾಜ್ಯ ಸರ್ಕಾರದಿಂದಾಗಲೀ ಕೇಂದ್ರ ಸರ್ಕಾರದಿಂದಾಗಲೀ, ಜಿಲ್ಲಾ ಪರಿಷತ್‌ನಿಂದಾಗಲೀ ಯಾವ ಹಣವನ್ನೂ ಕೊಟ್ಟಿಲ್ಲ. ಅಂತಹ ಕ್ರೀಡಾಂಗಣಗಳಿಗೆ ತಾವು ಯಾವ ರೀತಿಯಾಗಿ ಸಹಾಯ ಮಾಡುತ್ತೀರಿ? ಬೇರೆ ಕಡೆ ಇದೇ ರೀತಿಯಾಗಿ ಇದ್ದರೆ ಯಾವ ರೀತಿಯಾಗಿ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಸ್ವಲ್ಪ ಹೇಳಬೇಕು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು) :— ಮಾನ್ಯ ಅಧ್ಯಕ್ಷರೇ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮೊನ್ನೆ ದಿನ ಸಹ ನನಗೆ ಈ ಪ್ರಶ್ನೆಯನ್ನು ಕೇಳಿದರು. ತಾಲ್ಲೂಕು ಕ್ರೀಡಾಂಗಣವನ್ನು ನಿರ್ಮಾಣ ಮಾಡತಕ್ಕಂಥಾ ಜವಾಬ್ದಾರಿಯನ್ನು ಅಲ್ಲಿ ಸ್ಥಳ ಪರಿಶೀಲನೆ ಮಾಡಿ, ಅಲ್ಲಿ ಸುಮಾರು 6-7 ಎಕರೆ ಜಮೀನನ್ನು ಗುರುತಿಸಿ ಕೊಟ್ಟಾಗ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಇಂತಹ ಕ್ರೀಡಾಂಗಣಗಳಿಗೆ ಸುಮಾರು 10 ಲಕ್ಷ ರೂಪಾಯಿಗಳನ್ನು ಅವರು ಬಿಡುಗಡೆ ಮಾಡುತ್ತಾರೆ. ಅದಕ್ಕೆ ಪೂರಕವಾಗಿ ಅಲ್ಲಿನ ಸ್ಥಳೀಯ ಸಂಘ ಸಂಸ್ಥೆಗಳು ಬೇರೆ ಬೇರೆ ಸಂಸ್ಥೆಗಳಿಂದ ಹಣ ಶೇಖರಣೆ ಮಾಡಿದಾಗ ಅದಕ್ಕೆ ಒಟ್ಟು ಖರ್ಚು ಆಗುವಂತಹ ಹಣ 30 ಲಕ್ಷ ರೂಪಾಯಿಗಳು ಇರಬಹುದು, 40 ಲಕ್ಷ ರೂಪಾಯಿಗಳು ಇರಬಹುದು, 45 ಲಕ್ಷ ರೂಪಾಯಿಗಳು ಇರಬಹುದು; ಆಡಳಿತಾತ್ಮಕವಾದ ಅನುಮೋದನೆಗೆ ಮಾತ್ರ ಸರ್ಕಾರಕ್ಕೆ ಅದು ಬರುತ್ತದೆ. ಎನ್ನುವುದನ್ನು ನಾನು ಇಲ್ಲಿ ಸ್ಪಷ್ಟಪಡಿಸುತ್ತಿದ್ದೇನೆ. ತಾವು ಹೇಳಿದ ಹಾಗೆ ಅನೇಕ ತಾಲ್ಲೂಕುಗಳಲ್ಲಿ ಸಹ ಇದೇ ರೀತಿಯಾದ ಪ್ರಶ್ನೆ ಉದ್ಭವವಾಗುತ್ತಿದೆ. ತಾಲ್ಲೂಕು ಮಟ್ಟದಲ್ಲಿ ಅವರು ಮೊದಲು ಸ್ಥಳವನ್ನು ಗುರುತಿಸಿ, ಅವರು ಯಾವ ಯಾವ ಸಂಸ್ಥೆಯಿಂದ ಎಷ್ಟು ಹಣ ಶೇಖರಣೆ ಮಾಡಿ ಸಹಾಯ ಮಾಡುತ್ತಾರೆಂದು ಗೊತ್ತಾದ ಮೇಲೆ ಆ ಒಂದು ಪ್ರಸ್ತಾವನೆ ಸರ್ಕಾರಕ್ಕೆ ಬಂದಾಗ ಆಡಳಿತಾತ್ಮಕ ಅನುಮತಿಯನ್ನು ಮಾತ್ರ ಸರ್ಕಾರ ಕೊಡುತ್ತದೆ. ಆ ಸಂಬಂಧದಲ್ಲಿ ಇದರ ಬಗ್ಗೆ ನಾನು ಪರಿಶೀಲಿಸಿ ತಮಗೆ ಪ್ರತ್ಯೇಕವಾಗಿ ತಿಳಿಸುತ್ತೇನೆ.

ಕೊಡಗಿನಲ್ಲಿ ಆನೆ ತುಳಿತದಲ್ಲಿ ಸತ್ತವರಿಗೆ ಪರಿಹಾರ.

346 (2348) ಶ್ರೀ ಎಂ.ಪಿ. ಅಪ್ಪಚ್ಚುರಂಜನ್ (ಸೋಮವಾರ ಪೇಟೆ) :— ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಿನಾಂಕ: 1-4-97 ರಿಂದ 31-5-99ರ ತನಕ ಕೊಡಗಿನಲ್ಲಿ ಆನೆ ತುಳಿತದಲ್ಲಿ ಸತ್ತವರ ಸಂಖ್ಯೆ ಎಷ್ಟು ಮತ್ತು ಗಾಯಗೊಂಡವರ ಸಂಖ್ಯೆ ಎಷ್ಟು?